## ‘ಮೊದಲು ಗಮನಿಸಲಿ, ನಂತರ ಚರ್ಚೆ ನಡೆಯಲಿ...



ಕನ್ನಡದಲ್ಲಿ ಮಕ್ಕಳ ಸಾಹಿತ್ಯವು ನಿಜಕ್ಕೂ ಹೊಸ ವಿಧಾನದಲ್ಲಿ ಬರುತ್ತಿದೆ. ಅದನ್ನು ಗಮನಿಸುವವರಿಲ್ಲ ಅಷ್ಟೇ. ವಿಶ್ವವಿದ್ಯಾಲಯ ಮಟ್ಟದಲ್ಲಿ ಸಾಹಿತ್ಯ ಚರ್ಚೆಗಳಾದರೆ ಸಾಕೆ? ದೊಡ್ಡವರಿಗಾಗಿ ಬರೆಯುವ ಸಾಹಿತಿಗಳ ಬರವಣಿಗೆ ಭಾರೀ ಸುದ್ದಿಯಾಗುತ್ತದೆಯೇ ಹೊರತು, ಮಕ್ಕಳ ಸಾಹಿತ್ಯವನ್ನು ಗಮನಿಸುವವರು ಕಡಿಮೆಯಾಗಿದ್ದಾರೆ. ಅದರ ಅರ್ಥ, ಈಗಿನ ಕಾಲಕ್ಕೆ ಬೇಕಾದ ಮಕ್ಕಳ ಸಾಹಿತ್ಯ ಸೃಷ್ಟಿಯಾಗುತ್ತಿಲ್ಲ ಎಂದಲ್ಲ. ಉದಾಹರಣೆಗೆ, ವಿಜಯಶ್ರೀ ಹಾಲಾಡಿ ಅವರು ‘ಕಾಡಿನ ಕಥೆಗಳು’ ಎಂಬ ಸುಂದರ ಪುಸ್ತಕ ಬರೆದಿದ್ದಾರೆ. ಮಕ್ಕಳಿಗೆ ಬಹಳ ಇಷ್ಟವಾಗುವ ಕಥೆಗಳು ಅವು. ತಮ್ಮಣ್ಣ ಬೀಗಾರ, ಶಿವಲಿಂಗಪ್ಪ ಹಂದಿಹಾಳ, ಗಣೇಶ್ ನಾಡೋರ್, ವೈ.ಜಿ. ಭಗವತಿ, ನಿರ್ಮಲ ಸುರತ್ಕಲ್... ಎಲ್ಲರೂ ತಮ್ಮ ಪರಿಸರದ ಅನುಭವಗಳನ್ನೇ ಸೂಕ್ಷ್ಮ ಸಂವೇದನೆಯಿಂದ ಬರೆಯುತ್ತಿದ್ದಾರಲ್ಲ. ಆ ರಚನೆಗಳ ಕುರಿತು ಚರ್ಚೆ ಮಾಡುವುದಕ್ಕೆ ದೊಡ್ಡ ಸಾಹಿತಿಗಳಿಗೆ ಪುರುಸೊತ್ತಿಲ್ಲದಾಗಿದೆ. ಇನ್ನು ಸಾಮಾನ್ಯವಾಗಿ, ನಾವು ಮಕ್ಕಳಿಗೆ ಹೇಳುವ ಜನಪದ ಕತೆಗಳೆಲ್ಲ ಮಕ್ಕಳ ಕಥೆಗಳಲ್ಲ. ದೊಡ್ಡವರ ಕಥೆಗಳನ್ನೇ ಸರಳವಾಗಿ ಮಕ್ಕಳಿಗೆ ಹೇಳಿದವು ಅವು. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಎಷ್ಟೊಂದು ವಿಪುಲವಾಗಿ ಬರುತ್ತಿದೆ ಎಂಬುದನ್ನು ಗಮನಿಸುವ ಕೆಲಸ ಮೊದಲನೆಯದಾಗಿ ಆಗಬೇಕು. ಅದಾದ ಬಳಿಕ, ಈ ನಿರೂಪಣೆಯ ಬಗ್ಗೆ ಅಥವಾ ಅವುಗಳ ಪರಿಣಾಮ ಮುಂತಾದ ವಿಚಾರಗಳ ಬಗ್ಗೆ ಸಂವಾದ ಮಾಡಬಹುದು.

**-ಆನಂದ ಪಾಟೀಲ**, ಮಕ್ಕಳ ಸಾಹಿತಿ, ಧಾರವಾಡ

ಸುಳ್ಳಾಗಬಹುದು... ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು...’ ಎಂಬ ಸಿನಿಮಾ ಹಾಡನ್ನು ಮಗಳಿಗೆ ಕೇಳಿಸಬಹುದು ಎಂದು ಯೋಚಿಸಿದ್ದರು.

ಅಮ್ಮ–ಮಗಳ ಕಥಾ ಕಾಲಕ್ಷೇಪ ಶುರುವಾದುದು ಸಂಜೆಯ ಸುಮಾರಿಗೆ.

“ಒಂದೂರಲ್ಲಿ ಒಂದು ಮನೆಯಿತ್ತು. ಅದರ ಮುಂದೆ ಒಂದು ಸಣ್ಣ ತೋಟವಿತ್ತು. ಮನೆಯಲ್ಲಿ ಅಮ್ಮ–ಅಪ್ಪ ಮತ್ತು ಪುಟ್ಟ ಮಗು ವಾಸಿಸುತ್ತಿದ್ದರು. ಆ ಮಗುವಿಗೆಂದು ಒಂದು ತೊಟ್ಟಿಲನ್ನು ನಡುಮನೆಯಲ್ಲಿಯೇ ಕಟ್ಟಿದ್ದರು.

‘ಹೂಂ.’

ಒಂದು ದಿನ ಮನೆಯಲ್ಲಿ ನೀರು ಮುಗಿಯಿತು ಎಂದು ಗೊತ್ತಾಗಿ, ಅಮ್ಮ ಒಂದು ಕೊಡ ಹಿಡಿದುಕೊಂಡು ನೀರು ತರಬೇಕೆಂದು ಹೊರಟಳು. ಆದರೆ ಮನೆಯಲ್ಲಿ ಪುಟ್ಟ ಮಗುವೊಂದನ್ನೇ ಬಿಟ್ಟು ಹೋಗುವುದಕ್ಕೆ ಆಗುತ್ತದೆಯೇ?

‘ಇಲ್ಲ... ಆದರೆ ಆ ಅಮ್ಮ ನೀರು ತರಲು ಎಲ್ಲಿಗೆ ಹೋಗೋದು?’

ಬಾವಿಯಿಂದ ನೀರು ತರಲು ತೋಟಕ್ಕೆ ಹೋಗುವುದು. ಮನೆಯಲ್ಲಿಯೇ ಇದ್ದ ಪ್ರೀತಿಯ ಬೆಕ್ಕನ್ನು ಕರೆದು, ನೀರು ತರುವವರೆಗೆ ಮಗುವನ್ನು ನೋಡಿಕೊಳ್ಳಬೇಕು ಎಂದು ಹೇಳಿದಳು.

### ಯಾಕೆ? ಅವರು ಮನೆಗೆ ನಲ್ಲಿ ಹಾಕಿಸಿಕೊಳ್ಳಬಹುದಲ್ವ?

ಹೀಗೆ ಕಥೆಯ ಕಾತ್ಯಾಯಿನಿಯ ಕಥಾ ಹರಿವಿಗೆ ಆಗಾಗ ಬ್ರೇಕ್ ಬೀಳುತ್ತಿತ್ತು. ಈ ಪ್ರಶ್ನೆಗಳು ನಗು ತರಿಸಿದರೂ ಅವೆಲ್ಲ ಈ ಕಾಲದ ಮಕ್ಕಳ ಮನದಲ್ಲಿ ಸಹಜವಾಗಿ ಮೂಡಬಹುದಾದ ಪ್ರಶ್ನೆಗಳು. ಮನೆಯಲ್ಲಿ ನೀರು ಮುಗಿದರೆ ಮೋಟರ್ ಹಾಕಿದ ನಂತರ ನಲ್ಲಿಯಲ್ಲಿ ನೀರು ಬರುವುದನ್ನಷ್ಟೇ ನೋಡಿದ ಪುಟ್ಟಿಯು ಸಹಜವಾಗಿ ಈ ಪ್ರಶ್ನೆಯೆಸೆದಿದ್ದಳು.

ನಾವು ಬಾಲ್ಯದಲ್ಲಿ ಕೇಳಿದ ಕಥೆಗಳನ್ನು ಅದೇ ಮಾದರಿಯಲ್ಲಿ ಮಕ್ಕಳಿಗೆ ದಾಟಿಸುವುದು ಸಾಧ್ಯವಿಲ್ಲ. ಆಯಾ ಕಾಲಕ್ಕೆ ತಕ್ಕಂತೆ ಮಕ್ಕಳ ಕಥೆಗಳು ಹೆಚ್ಚು ವಿಚಾರಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ, ಹೊಸ ರೂಪು ಪಡೆಯಬೇಕಾಗುತ್ತದೆ. ಕೆಲವೊಮ್ಮೆ ಕಥೆಯೊಳಗೆ ಸೇರಿದ್ದ, ಸಕಾಲಿಕವಲ್ಲದ ಅನಗತ್ಯ ವಿಚಾರಗಳನ್ನು ಬಿಡಬೇಕಾಗುತ್ತದೆ.

ಕಥೆಗಳು ಮನುಷ್ಯನ ನೆರಳಿನಂತೆಯೇ ಸಾಗಿಬಂದಿರುವ ಸೃಜನಶೀಲ ರಚನೆಗಳಷ್ಟೆ. ಈ ಕಥೆಗಳು ಮನುಷ್ಯನು ಬಾಳಿ ಬದುಕಿದ ಆಯಾ ಕಾಲಘಟ್ಟದ ಚಿತ್ರಣಗಳಿಗೆ ಹಿಡಿದ ಕನ್ನಡಿಯೂ ಹೌದು. ಜೊತೆಗೆ, ಆಯಾ ಕಾಲಮಾನದ ಜನರ ಆಶಯಗಳ ಬೀಜರೂಪವೂ ಹೌದು. ಇಂತಹ ಆಶಯಗಳು ಮಕ್ಕಳ ಕಥೆಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತವೆ. ಯಾಕೆಂದರೆ, ನಾವು ಮಕ್ಕಳಿಗಾಗಿ ಹೇಳುವ ಕಥೆಗಳಲ್ಲಿ ನೀತಿಯದೊಂದು ಎಳೆ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ನೈತಿಕತೆ ಎನ್ನುವುದು ಕೂಡ ನದಿಯ ತಳದ ಮರಳಿನಂತೆ ನಿಧಾನವಾಗಿ ಬದಲಾಗುತ್ತಿರುವ ಪರಿಕಲ್ಪನೆಯೇ ಅಲ್ಲವೇ. ಇಂದು ಹಿರಿಯರ ಬಾಲ್ಯದಲ್ಲಿದ್ದ ನೈತಿಕತೆಯ ಪರಿಕಲ್ಪನೆಗೂ, ಇಂದು ಸಮಾಜದಲ್ಲಿರುವ ನೈತಿಕತೆಯ ಪರಿಕಲ್ಪನೆಗೂ ವ್ಯತ್ಯಾಸವಿದ್ದೇ ಇದೆ. ಈ ಬದಲಾವಣೆಗಳನ್ನೂ ಮಕ್ಕಳ ಕಥೆಗಳು ಧ್ವನಿಸುತ್ತವೆ, ಧ್ವನಿಸಬೇಕು.

### ಪೂರ್ವಗ್ರಹಗಳನ್ನು ಮೀರುವ ಸಮಯ

ನಮ್ಮ ಆಡುಮಾತಿನಲ್ಲಿಯೇ ಕಪ್ಪು ಮತ್ತು ಬಿಳಿ ಬಣ್ಣದ ನಡುವೆ ಎಷ್ಟೊಂದು ಅಸಮಾನತೆಯ ಮಾತುಗಳು ಸೇರಿಕೊಂಡಿರುತ್ತವೆ ಎನ್ನುವುದನ್ನು ಗಮನಿಸಿದ್ದೀರಾ? ‘ಛೀ... ಕೈ ಕಪ್ಪು ಕಪ್ಪು ಕೊಳೆಯಾಗಿದೆ ನೋಡು... ಹೋಗು, ಕೈ ತೊಳಿ’





‘ನ್ಯೂ ಸಿಂಡ್ರೆಲಾ ಸ್ಟೋರಿ’ ಸಿನಿಮಾದಲ್ಲಿನ ಸಿಂಡ್ರೆಲಾ ಕಥೆಯ ಮರುನಿರೂಪಣೆ ಇತರ ಮಾಧ್ಯಮಗಳಿಗೂ ಮಾದರಿ. ಎಲ್ಲಿಯೂ ವಾಚ್ಯವಾಗದೇ ಸಹಜವಾಗಿಯೇ ಮೂಡಿರುವ ಈ ಚಿತ್ರವು ನಮ್ಮ ನಡುವೆ ಇರುವ ಸಿದ್ಧಮಾದರಿಗಳನ್ನು ಮುರಿದು ಕಟ್ಟುವ ಬಗೆಗೆ ಒಂದು ಮಾದರಿ.

**-ಸಬಿತಾ ಬನ್ನಾಡಿ**, ಹಿರಿಯ ಲೇಖಕಿ